ಓ ಎಸ್ ನಂ.84/2022

ಪಿ.ಡಬ್ಲ್ಯೂ-1 ಮಲಕಪ್ಪ ತಂದೆ ಬಸಣ್ಣ

**(ಇಂದು ದಿನಾಂಕಃ 10-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲು: ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ನನಗೆ ಇಂಗ್ಲೀಷ್ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಇಂಗ್ಲೀಷ್ ನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಅದನ್ನು ಯಾರು ಓದಿ ಹೇಳಿಲ್ಲ. ದಾವಾ ಆಸ್ತಿ ಸರ್ವೆ ನಂಬರ ೨೨೨/೫ ಆಗಿರುತ್ತದೆ. ಸರ್ವೆ ನಂಬರ ೨೨೨ ರಲ್ಲಿ ಒಟ್ಟು ೧೩ ಹಿಸ್ಸೆಗಳು ಇರುತ್ತವೆ. ಸರ್ವೆ ನಂಬರ ೨೨೨/೫ ಜಮೀನು ಗಾಣಗಾಪೂರದಿಂದ ಬಂದರವಾಡಕ್ಕೆ ಹೋಗುವ ರಸ್ತೆಗೆ ತಾಗಿ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಸರ್ಕಾರಿ ರಸ್ತೆ ಆಗಿರುತ್ತದೆ ಎಂದರೆ ಸರಿ. ನಿಪಿ-೪ ರ ಪೋಟೋದಲ್ಲಿ ನಾನೆ ಇರುತ್ತೇನೆ ಎಂದರೆ ಸರಿ. ನಿಪಿ-೯ ರ ಪೋಟೋದಲ್ಲಿ ನಾನು ಜಮೀನಿನ ಬಾಂದಾರ ಮೇಲೆ ನಡೆಯುತ್ತಿರುವುದು ಇರುತ್ತದೆ.

೨. ನಿಪಿ-೯ ರಲ್ಲಿ ಜಮೀನು ಬೀಳು ಇರುವುದು ಕಾಣುತ್ತದೆ ಎಂದರೆ ಸರಿ. ದಾವಾ ಜಮೀನು ಅನುಸುಬಾಯಿರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಅನುಸುಬಾಯಿ ನನ್ನ ಹೆಂಡತಿಯಾಗಿರುತ್ತಾರೆ ಎನ್ನುತ್ತಾರೆ. ದಾವೆ ಸಲ್ಲಿಸುವ ಮೊದಲು ನನ್ನ ಹೆಂಡತಿಯ ಹೆಸರಿನಲ್ಲಿ ಜಮೀನು ಇದ್ದ ಬಗ್ಗೆ ನನಗೆ ಗೊತ್ತಿತ್ತು. ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ ನಂತರ ನಾನು ನನ್ನ ಹೆಂಡತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ. ನನ್ನ ಹೆಂಡತಿ ನನಗೆ ಸಾಕ್ಷ್ಯ ನುಡಿಯಲು ಯಾವುದೇ ಅಧಿಕಾರ ಪತ್ರ ನೀಡಿಲ್ಲ. ದಾವೆ ಹಾಕುವ ಮೊದಲು

ನಾನು ತಹಶೀಲ್ದಾರರಿಗೆ ಒಂದು ಅರ್ಜಿ ನೀಡಿದ್ದೆ ಎಂದರೆ ಸರಿ. ತಹಶೀಲ್ದಾರರು ಸರ್ವೆಯರವರನ್ನು ಕಳುಹಿಸಿದ್ದರು ಎಂದರೆ ಸರಿ. ತಹಶೀಲ್ದಾರರು ನಕ್ಷೆಯಂತೆ ಅಲ್ಲಿ ಯಾವುದೇ ದಾರಿ ಇಲ್ಲ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ.

೩. ನಮ್ಮ ಜಮೀನಿಗೆ ಹೋಗಲು ದಿಗಂಬರ ಭಟ್ ಮತ್ತು ವಿಠಲ್ ಬೋಗಿರವರ ಜಮೀನುಗಳ ಮದ್ಯದಲ್ಲಿ ದಾರಿ ಇರುತ್ತದೆ ಎಂದರೆ ಸರಿ. ಸಾಕ್ಷಿ ಅವರು ನಮ್ಮ ಜಮೀನಿನ ಮೂಲಕ ಹೋಗುತ್ತಾರೆ ಎನ್ನುತ್ತಾರೆ. ಸದರಿ ದಾರಿ ನನ್ನ ಜಮೀನಿನವರೆಗೂ ಇರುತ್ತದೆ ಎಂದರೆ ಸರಿ. ನನಗೆ ನನ್ನ ಹೆಂಡತಿ ಅಧಿಕಾರ ಪತ್ರ ನೀಡದೆ ಇದ್ದುದರಿಂದ ನನಗೆ ದಾವೆ ಹಾಕುವ ಮತ್ತು ಸಾಕ್ಷ್ಯ ನುಡಿಯುವ ಹಕ್ಕು ಇಲ್ಲ ಎಂದರೆ ಸರಿ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.